## ಕಲಾತ್ಮಕ ಎಲೆ ಅಡಿಕೆ ಡಬ್ಬಿ

ನೋಡಲು ಇದು ಬಾತುಕೋಳಿ ಅದರ ಉದರದೊಳಗೆ ಎಲೆ, ಅಡಿಕೆ, ಸುಣ್ಣ, ಕಾಚು, ಲವಂಗ, ಏಲಕ್ಕಿಯನ್ನು ಇಡುವ ಕಪಾಟುಗಳಿವೆ. ಬಾತುಕೋಳಿಯ ಕತ್ತನ್ನು ನೇರವಾಗಿ ತಿರುಗಿಸಿದರೆ, ಆ ಡಬ್ಬಿಯ ಮುಚ್ಚಳ ಗಟ್ಟಿಯಾಗಿ ಕೂತ್ಕೊಳ್ಳುತ್ತೆ. ಮತ್ತೆ ಬೇಕಾದಾಗ ಬಾತುಕೋಳಿಯ ಕತ್ತನ್ನು ಪಕ್ಕಕ್ಕೆ ತಿರುಗಿಸಿದರೆ ತಾಂಬೂಲಕ್ಕೆ ಬೇಕಾದ ಎಲ್ಲ ಪದಾರ್ಥಗಳು ಒಂದೇ ಕಡೆ ಸಿಗುತ್ತವೆ.

ಮೊದಲೆಲ್ಲ ಕುಟುಂಬದ ಸದಸ್ಯರೆಲ್ಲ ಒಟ್ಟಿಗೆ ಕುಳಿತು ಊಟ ಮಾಡಿ, ಹರಟೆ ಹೊಡೆಯುತ್ತಾ ತಾಂಬೂಲ ಸೇವನೆ ಮಾಡ್ತಾ ಇದ್ದರು. ಮೊನ್ನೆ ನಮ್ಮ ಅತ್ತೆ ಮನೆಯಲ್ಲಿ ಹಳೆಯ ಸಾಮಾನುಗಳ ಇದೂ ಕಾಣಿಸಿತು. ನೋಡುತ್ತಿದ್ದಂತೆ ಹಳೆಯ ನೆನಪುಗಳೆಲ್ಲ ಮರುಕಳಿಸಿತು.

—ವಾಣಿ ಉಪಾಧ್ಯ







## ಕಂಗೊಳಿಸುವ ಕಡೂರಿನ ಕೆರೆಗಳು

ಈ ವರ್ಷದ ಒಳ್ಳೆಯ ಮಳೆಯಿಂದ ಕಡೂರಿನ ಜೀವನಾಡಿ ಕೆರೆಗಳಾದ ಅಯ್ಯನ ಕೆರೆ ಹಾಗೂ ಮದಗದ ಕೆರೆ ಮೈದುಂಬಿವೆ. ಚಂದ್ರದ್ರೋಣ ಪರ್ವತದ ತಪ್ಪಲಿನಲ್ಲಿರುವ ಅಯ್ಯನ ಕೆರೆ ಸುಮಾರು 12ನೇ ಶತಮಾನದಲ್ಲಿ ನಿರ್ಮಾಣವಾದ ಪ್ರಾಚೀನ ಕೆರೆ. 15 ಚದರ ಕಿ.ಮೀಗಳಷ್ಟು ಅಗಾಧ ವಿಸ್ತಾರದ ಈ ಕೆರೆ ಕಡೂರು ಹಾಗೂ ಚಿಕ್ಕ ಮಗಳೂರಿನ ನಡುವಿನ ಸಖರಾಯಪಟ್ಟಣದ ಸಮೀಪದಲ್ಲಿದೆ. ಕಡೂರಿನಿಂದ ಸುಮಾರು 25ಕಿ.ಮೀ ದೂರದಲ್ಲಿರುವ ಮದಗದ ಕೆರೆ 2036 ಹೆಕ್ಟೇರ್ ಕೃಷಿಭೂಮಿಗೆ ನೀರೊದಗಿಸುವ ವಿಶಾಲ ಕೆರೆ. ಈ ಭಾಗದ 25ಕ್ಕೂ ಹೆಚ್ಚು ಕೆರೆಗಳಿಗೆ ಸಂಪರ್ಕ ಕೊಂಡಿಯಾಗಿವೆ.

—ಎಚ್.ಎಸ್. ನವೀನಕುಮಾರ್ ಹೊಸದುರ್ಗ

## ಗೃಹಾಲಂಕಾರಕ್ಕೆ ಫಿಲಿಗ್ರಿ

ಬಣ್ಣ ಬಣ್ಣದ ಕ್ವಿಲ್ಲಿಂಗ್ ಹಾಳೆಗಳನ್ನು, ಕಾಗದ ಪಟ್ಟಿಗಳನ್ನು ಸುರುಳಿಯಾಕಾರದಲ್ಲಿ ಸುತ್ತಿ, ಮಡಚಿ ಒಂದು ನಿರ್ದಿಷ್ಟ ವಿನ್ಯಾಸದಲ್ಲಿ ಅಂಟಿಸಿ ಮಾಡುವ ಕರಕುಶಲ ಕಲೆ ಪೇಪರ್ ಫಿಲಿಗ್ರಿ. ಇದನ್ನು ಕ್ವಿಲ್ಲಿಂಗ್ ಡಿಸೈನ್ ಎಂತಲೂ ಕರೆಯುವರು. ಯೂರೋಪಿನ ನವೋದಯ ಕಾಲಘಟ್ಟದಲ್ಲಿ ಫಿಲಿಗ್ರಿ ಖ್ಯಾತಿಗೆ ಬಂದಿದೆ. 18ನೇ ಶತಮಾನದಲ್ಲಿ ಗೃಹಾಲಂಕಾರಕ್ಕೆ ಫಿಲಿಗ್ರಿಯನ್ನೇ ಇಟಲಿಯ ಸನ್ಯಾಸಿಗಳು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅಲ್ಪ ವೆಚ್ಚದಲ್ಲಿ ಮನೆಯನ್ನು ಸಿಂಗರಿಸಲು, ಆಮಂತ್ರಣ – ಶುಭಾಶಯ ಪತ್ರ ರೂಪಿಸಲು ಕ್ವಿಲ್ಲಿಂಗ್ ಡಿಸೈನ್ ಹೆಚ್ಚು ಬಳಕೆಯಾಗಿದೆ.

—ಪ್ರಿಯಾಂಕಾ ಎರೇಸೀಮಿ, ಹಾವೇರಿ

